**ಸಾಕ್ಷಿಯನ್ನು ದಿಃ *04/08/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಮುಂದುವರೆದ ಪಾಟೀ ಸವಾಲು : ಶ್ರೀ ಎಸಟಿಪಿ ವಕೀಲರಿಂದ ಪ್ರತಿವಾದಿಯರ ಪರವಾಗಿ.***

ದಿಃ14-12-2011 ರಂದು ಆನಂದಸಿಂಗ ಕಿಲ್ಲೇದಾರ ಇವರು ಹರೀಶಸಿಂಗ ಕಿಲ್ಲೇದಾರ ಇವರಿಗೆ ಮಾಡಿರುವ ಭಕ್ಷೀಸಪತ್ರದ ಬಗ್ಗೆ ತಿಳಿದುಕೊಂಡಿದ್ದೇನೆ. ಸದರಿ ಭಕ್ಷೀಸಪತ್ರ ನಾನು ನೋಡಿಲ್ಲ. ನಿ.ಪಿ.8 ರ ಕುರಿತು ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತಾಗಿರುವ ಕಾರಣ ನನ್ನ ಸಮ್ಮತಿ ಇಲ್ಲದೇ ಪರಭಾರೆ ಮಾಡಲು ಬರುವುದಿಲ್ಲ ಎಂದು ಪರಿಹಾರ ಕೇಳಿದ್ದೇನೆ. ನಿ.ಪಿ.8 ರ ಒಳ ಸಂಗತಿಗಳನ್ನು ನಾನು ನೋಡಿಲ್ಲ. ಆನಂದಸಿಂಗ ಇವರು ತನ್ನ ¼ ಹಿಸ್ಸೆಯನ್ನು ಹರೀಶಸಿಂಗ ಇವರಿಗೆ ಭಕ್ಷೀಸ ಮಾಡಿರುವ ಬಗ್ಗೆ ಬರೆದಿರುವುದನ್ನು ನಾನು ನೋಡಿಲ್ಲ. ಹಾಗೇ ಭಕ್ಷೀಸಪತ್ರ ಮಾಡಿದ ಸ್ವತ್ತಿನ ನಂಬರ ಸ್ಪಷ್ಟವಾಗಿ ನನಗೆ ಗೊತ್ತಿಲ್ಲ. ನಿ.ಪಿ.8 ರ ಕುರಿತು ನಾನು ಈ ದಾವೆಯಲ್ಲಿ ಯಾವುದೇ ಪರಿಹಾರ ಕೇಳಿಲ್ಲ ಎಂದರೆ ಸರಿಯಲ್ಲ.

ದಿಃ30-03-2012 ರಂದು ನಿ.ಪಿ.8 ರ ಕುರಿತು ದುರಸ್ತಿ ಪತ್ರ ಆಗಿರುವುದನ್ನು ನಾನು ನೋಡಿಲ್ಲ. ಆಸ್ತಿ ನಂ.309/1 ಹಾಗೂ 310/1 ರ ಕುರಿತು ನಿ.ಪಿ.8 ರ ದುರಸ್ತಿ ಪತ್ರ ಮಾಡಿಕೊಂಡಿರುವುದು ನನಗೆ ಗೊತ್ತಿಲ್ಲ. ನಿ.ಪಿ.8 ಮತ್ತು ಅದರ ಕುರಿತಾದ ದುರಸ್ತಿ ಪತ್ರಕ್ಕೆ ನಾನು ಅಥವಾ ನನ್ನ ತಾಯಿ ಯಾವುದೇ ರೀತಿ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಆಸ್ತಿ ನಂ.309/1 ಹಾಗೂ 310/1 ರ ಕುರಿತು ದಿಃ24-01-2009 ರಂದು ವಿಜಯಲಕ್ಷ್ಮೀ ಕೋ-ಆಫ್ ಕ್ರೆಡಿಟ್ ಸೌಹಾರ್ದ ಲಿ. ಗೆ ಡಿಪಾಜಿಟ ಆಫ್ ಟೈಟಲ ಡಿಡ್ ಮಾರ್ಟಗೇಜ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮಾರ್ಟಗೇಜ ಡಿಡ್‌ನ್ನು ಹರೀಶಸಿಂಗ ಮತ್ತು ಆನಂದಸಿಂಗ ಕೂಡಿಯೇ ಬರೆದುಕೊಟ್ಟಿರುವುದು ನನಗೆ ಗೊತ್ತಿಲ್ಲ. ಸದರಿ ಅಡಮಾನದ ಕುರಿತು ಸದರಿ ಸ್ವತ್ತುಗಳ ಉತಾರದಲ್ಲಿ ಋಣಭಾರದ ಕುರಿತು ನಮೂದಾಗಿದೆ ಎನ್ನುವ ಕುರಿತು ನನಗೆ ಗೊತ್ತಿಲ್ಲ. ದಿಃ17-01-2012 ರಂದು

ಹರೀಶಸಿಂಗ ಇವರು ಸದರಿ ಆಸ್ತಿಗಳ ಮೇಲಿನ ಸಾಲವನ್ನು ತಿರುವಳಿ ಮಾಡಿ ಭೋಜಾವನ್ನು ವಿಮೋಚನಾ ಪತ್ರದ ಮೂಲಕ ಬರೆಯಿಸಿಕೊಂಡಿರುವ ಕುರಿತು ನನಗೆ ಮಾಹಿತಿ ಇಲ್ಲ. ಹರೀಶಸಿಂಗ ಇವರು ಮನೆತನದ ಕಾಳಜಿ ವಹಿಸುತ್ತಿದ್ದ ಕಾರಣ ಆನಂದಸಿಂಗ ಇವರು ನಿ.ಪಿ.8 ಮತ್ತು ಅದರ ತಿದ್ದುಪಡಿ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ವಿಮೋಚನಾ ಪತ್ರದಲ್ಲಿ ಸಾಲ ಪಡೆದ ಮತ್ತು ತಿರುವಳಿ ಮಾಡಿದ ಕುರಿತು ವಿವರವಾಗಿ ಬರೆದಿರುವುದನ್ನು ನಾನು ನೋಡಿಲ್ಲ. ನನಗೂ ಮತ್ತು ದಾವಾ ಸ್ವತ್ತಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿ.ಪಿ.8 ಕ್ಕೂ ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ನೀಡಲು ಸುಳ್ಳು ದಾವ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.